

# ‘ಹಕ್ಕಿಗೂಡು’

ಜತನದಿಂದ ಹುಡುಕಿ ತಂದ ಬಿರುಸು
ಎಳೆಗಳ ಹಣಿದು, ಚೆಂದದಿ ಹೆಣೆದು,
ಬಿರುಕು ಬಿಡಲು ಗೋಡೆಯೇ ಇರದ
ಗೂಡು ಕಟ್ಟಿದ...

ಎಂಥಾ ಮೋಹದ ಗಂಡ!
ಎಂಥಾ ಮೋಹಕ ಗೂಡು!!
ಗೂಡು ಕಂಡಿತೆ? ಗಂಡು ಕಂಡಿತೆ!

ಆ ಮರುಳು ಹೆಣ್ಣು...
ಯಾವ ಮಾಟಕೋ ಮಣಿದು
ಕೊರಳಿನೊಲವ ಉಲಿಗೆ ನಾಚಿ
ಎದೆಗೊರಗಲು ಅಪ್ಪಿದವ ಅಪ್ಪನಾದ;
ಅಪ್ಪುಗೆಯ ಸುಖಕೆ ‘ಅಮ್ಮಮ್ಮಾ’
ಎಂದ ಹೆಣ್ಣು ಅಮ್ಮನಾಯಿತು!

ಹೆಣ್ಣುಹಕ್ಕಿಗೆ ಚಂದದ ಗೂಡಲಿ
ನಾಕಿರುಳ ಏಕಾಂತ ಬೇಕಿತ್ತು. ಹದಬೆಚ್ಚನೆ
ಬಿಸಿಲಿಗೆ ರೆಕ್ಕೆ ಬಿಚ್ಚಿ, ದಿನಕೊಂದು
ರೆಂಬೆಯ ಮೇಲೆ ತಾಸು ಕೂರಬೇಕಿತ್ತು...

ಆದರೆ, ಅಪ್ಪುಗೆಗೆ ಬಸಿರಾಗದಿರಲು
ಯಾವ ಹಕ್ಕಿಗೆ ಹಕ್ಕುಂಟು? ಗೂಡು
ಕಟ್ಟಿರುವುದು ಅಮ್ಮನಿಗಲ್ಲವೇ!

ಅಮ್ಮನಾದ ಹಕ್ಕಿಗೆ ಏನುಳಿಯಿತು?
ಗೂಡೊಳಗೆ ಬಂದಿಯಾಗಿ
ಸ್ವಾತಂತ್ರ್ಯವಳಿಯಿತು!

**● ವಸುಂಧರಾ ಕದಲೂರು**